# ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)

## ಕರ್ನಾಟಕ ರಾಜ್ಯಸಮಿತಿ

ಮಾನ್ಯ ಸಂಪಾದಕರೆ, ವರದಿಗಾರರೆ, ಮಾಧ್ಯಮ ಪ್ರತಿನಿಧಿಗಳೆ,  ಹೋರಾಟದ ಶುಭಾಶಯಗಳು.

ನಮ್ಮ ಪಕ್ಷದಿಂದ ಗುಂಪುಗಾರಿಕೆ ನಡೆಸಿ ಹೊರಹೋದ ಆರ್.ಸಿ.ಪಿ.ಯ (ಈ ಹಿಂದಿನ ಕೆ.ಎಂ.ಎಸ್.ಕೆ.) ಅರಾಜಕವಾದಿ, ವಿಚ್ಛಿನ್ನಕರ ಚಟುವಟಿಕೆಗಳ ಕುರಿತು ಸ್ಪಷ್ಟನೆ ನೀಡಲು ಈ ಹೇಳಿಕೆ ಬಿಡುಗಡೆ ಮಾಡುತ್ತಿದ್ದೇವೆ. ಇದನ್ನು ಆದ್ಯತೆ ಮೇರೆಗೆ ಪ್ರಕಟಿಸಬೇಕೆಂದು ಕೋರುತ್ತಿದ್ದೇವೆ.

**ಹೋರಾಟದಲ್ಲಿ ತಮ್ಮೊಂದಿಗೆ,**

**ಗಂಗಾಧರ್**<br>
**ರಾಜ್ಯ ಸಮಿತಿ ಪರವಾಗಿ**<br>
**ಸಿಪಿಐ (ಮಾವೊವಾದಿ)**<br>
**ಕರ್ನಾಟಕ**

೩೦.೦೯.೨೦೦೭

---

### ಪತ್ರಿಕಾ ಹೇಳಿಕೆ

ಕರ್ನಾಟಕದಲ್ಲಿ ನಮ್ಮ ಪಕ್ಷದಿಂದ ಹೊರಹೋದ ಗುಂಪು ಕೆ.ಎಂ.ಎಸ್.ಕೆ ಎಂಬ ಕೇಂದ್ರವೊಂದನ್ನು ರಚಿಸಿಕೊಂಡು ನಮ್ಮ ಪಕ್ಷದ ವಿರುದ್ಧ ಕೆಲಸ ಮಾಡುತ್ತಿರುವುದರ ಕುರಿತು ನಮ್ಮ ಈ ಹೇಳಿಕೆಯನ್ನು ಬಿಡುಗಡೆ ಮಾಡುತ್ತಿದ್ದೇವೆ. ಇವರು ಈಗ **'ಕ್ರಾಂತಿಕಾರಿ ಕಮ್ಯೂನಿಸ್ಟ್ ಪಕ್ಷ (RCP)'** ಎಂದು ಕರೆದುಕೊಂಡಿದ್ದಾರೆ. ಇದುವರೆಗೂ ಅವರುಗಳು ತಾವು ಮಾಡುತ್ತಿರುವ ಅರಾಜಕವಾದಿ, ವಿಚ್ಛಿನ್ನಕರ ಚಟುವಟಿಕೆಗಳ ಬಗ್ಗೆ ಅರ್ಥ ಮಾಡಿಕೊಳ್ಳಬಹುದೆಂದು ನೈಜ ಕ್ರಾಂತಿಕಾರಿ ರಾಜಕೀಯ ಮತ್ತು ಆಚರಣೆಯತ್ತ ಹೊರಳಲು ಅನುಕೂಲವಾಗಲಿ ಎಂದು ಬಹಿರಂಗವಾಗಿ ಈ ಗುಂಪಿನ ಬಗ್ಗೆ ಹೇಳಿರಲಿಲ್ಲ. ಆದರೆ ಅವರು ತಮ್ಮ ರಾಜಕೀಯ ಹಾಗೂ ಸಂಘಟನಾ ತಪ್ಪುಗಳನ್ನು ತಿದ್ದಿಕೊಳ್ಳುವ ಕಡೆ ಹೊರಳುವ ಬದಲಿಗೆ ಮತ್ತಷ್ಟು ತಪ್ಪುಗಳನ್ನು ಮಾಡುತ್ತಾ ಭಾರತದಲ್ಲಿ ಮುನ್ನಡೆಯುತ್ತಿರುವ ಕ್ರಾಂತಿಕಾರಿ ಚಳುವಳಿಯ ವಿರುದ್ಧ ವಿಕೃತ ಅಪಪ್ರಚಾರವನ್ನು ಬಹಿರಂಗವಾಗಿ ಮತ್ತು ರಹಸ್ಯವಾಗಿ ದೇಶಾದ್ಯಂತ ಮಾಡುತ್ತಿದ್ದಾರೆ. 'ಕ್ರಾಂತಿಯ ಗತಿತರ್ಕ' ಇನ್ನಿತರ ಪ್ರಕಟಣೆಗಳನ್ನು ತಂದು ಬಹಿರಂಗವಾಗಿ ವಿಕೃತ ಪ್ರಚಾರಗಳನ್ನು ಮಾಧ್ಯಮಗಳ ಮೂಲಕವೂ ಮಾಡುತ್ತಿದೆ. ಅಷ್ಟು ಮಾತ್ರವಲ್ಲದೆ ಸಂಘಟನಾತ್ಮಕವಾಗಿ ನಮ್ಮ ಪಕ್ಷದ ವಿರುದ್ಧ ಕೆಲಸ ಮಾಡುತ್ತಿದ್ದಾರೆ. ನಮ್ಮ ಪಕ್ಷದ ನಾಯಕತ್ವ ಹಾಗೂ ಆಂತರಿಕ ರಹಸ್ಯಗಳನ್ನು ಪ್ರಭುತ್ವಕ್ಕೆ ತೆರೆದಿಡುತ್ತಾ ಜನರ ಶತೃಗಳಿಗೆ ಮತ್ತು ಪ್ರಭುತ್ವಕ್ಕೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಜನರಿಗೆ ಈ ಗುಂಪಿನ ರಾಜಕೀಯ ಹಾಗೂ ಸಂಘಟನಾ ತಪ್ಪುಗಳು, ಮಾಡುತ್ತಿರುವ ಗಂಭೀರ ಹಾನಿಗಳು ಮತ್ತು ಈ ಗುಂಪಿನಿಂದಾಗುವ ಅಪಾಯಗಳ ಕುರಿತು ಸ್ಪಷ್ಟಪಡಿಸಬೇಕಾದ ಅನಿವಾರ್ಯತೆ ನಮ್ಮ ಮುಂದೆ ಬಂದಿದೆ. ಹಾಗಾಗಿ ಈಗ ಈ ಹೇಳಿಕೆಯನ್ನು ನೀಡುತ್ತಿದ್ದೇವೆ.

**ಪಕ್ಷದೊಳಗೆ ಗುಂಪುಗಾರಿಕೆ ಮಾಡಿಕೊಂಡು ಹೊರಹೋದ ಈ ಗುಂಪನ್ನು ನಮ್ಮ ಪಕ್ಷ ಬಲ ಅವಕಾಶವಾದಿ ಗುಂಪೆಂದು ಪರಿಗಣಿಸಿದೆ. ಪುಟ್ಟಬಂಡವಾಳಶಾಹಿ (ಸಾರಾಂಶದಲ್ಲಿ ಬಂಡವಾಳಶಾಹಿ) ವರ್ಗ ಗುಣಗಳ ಪ್ರಾಬಲ್ಯತೆ ಹೊಂದಿರುವ ಗುಂಪು ಇದಾಗಿದೆ. ಈ ಗುಂಪು ಪಕ್ಷದ ಕ್ರಾಂತಿಕಾರಿ ಪಥಕ್ಕೆ ಭಿನ್ನವಾಗಿರುವ ಪಥವನ್ನು ಹೊಂದಿದೆ. ಇವರ ರಾಜಕೀಯ ವಿಚಾರಗಳು ಮತ್ತು ಆಚರಣೆಗಳು, ಅಸ್ತಿತ್ವದಲ್ಲಿರುವ ಶೋಷಕ ವ್ಯವಸ್ಥೆಯನ್ನು ಬದಲಾಯಿಸುವ ಬದಲಿಗೆ ಅದಕ್ಕೆ ಪೂರಕವಾಗಿರುತ್ತವೆ. ನವ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಸ್ಥಾಪಿಸುವ ಆ ಮೂಲಕ ಸಮಾಜವಾದಿ ಕ್ರಾಂತಿ ಮತ್ತು ಪ್ರಪಂಚ ಸಮತಾವಾದಿ ಕ್ರಾಂತಿಯನ್ನು ಸಾಕಾರಗೊಳಿಸುವ ಉದ್ದೇಶಗಳನ್ನು ಅದಕ್ಕನುಗುಣವಾದ ಆಚರಣೆಗಳನ್ನು ಹೊಂದಲು ಸಾಧ್ಯವಿಲ್ಲ. ಹಾಗಾಗಿ ಇವರ ವಿಚಾರಗಳು ಮತ್ತು ಆಚರಣೆಗಳು ಸೇರಿ ಅವರನ್ನು ಬಲ ಅವಕಾಶವಾದಿಗಳೆಂದು ನಾವು ಪರಿಗಣಿಸಿದ್ದೇವೆ. ನಮ್ಮ ಮಹಾಧಿವೇಶನವು ಇದನ್ನು ಅನುಮೋದಿಸಿದೆ. ಅವರು ಪಕ್ಷದಲ್ಲಿ ಇದ್ದು ಕಾರ್ಯನಿರ್ವಹಿಸುತ್ತಿದ್ದಾಗಲೂ ಈ ತಪ್ಪುಗಳು ಅವರಲ್ಲಿದ್ದವು. ಕರ್ನಾಟಕ ಕ್ರಾಂತಿಕಾರಿ ಚಳುವಳಿಯ ಮೇಲೆ ಪ್ರಭುತ್ವದ ದಮನಕಾಂಡ ತೀವ್ರವಾಗುತ್ತಿರುವ ಸಂದರ್ಭದಲ್ಲಿ ನಿಲ್ಲಲಾಗದೆ ಕ್ರಾಂತಿಕಾರಿ ಪಕ್ಷದಿಂದಲೇ ಹೊರಹೋದರು. ಅವರ ರಾಜಕೀಯ ಮತ್ತು ಆಚರಣೆ ಅವರನ್ನು ಎಳೆದುಕೊಂಡು ಹೋಯಿತು. ಈಗ ಪ್ರಭುತ್ವಕ್ಕೆ ಸಹಾಯ ಮಾಡುವ ಮಟ್ಟಕ್ಕೆ ಹೋಗುತ್ತಿದ್ದಾರೆ. ಅವರ ಈ ರಾಜಕೀಯ ಗ್ರಹಿಕೆ ಮತ್ತು ಆಚರಣೆಗಳನ್ನು ಸರಿತಿದ್ದಲು ಸ್ವವಿಮರ್ಶೆ-ವಿಮರ್ಶೆ ಪದ್ಧತಿಗಳು ಹಾಗೂ ರಾಜಕೀಯ ಚರ್ಚೆಗಳ ಮೂಲಕ ೨೦೦೬ರ ರಾಜ್ಯ ಸಮ್ಮೇಳನದವರೆಗೂ ಪಕ್ಷ ನಾಯಕತ್ವ ಪ್ರಯತ್ನ ನಡೆಸಿತ್ತು. ಪಕ್ಷದಿಂದ ಹೊರಹೋಗುವ ಸಂದರ್ಭ ಮತ್ತು ಹೊರಹೋದ ನಂತರ ಅವರನ್ನು ಕ್ರಾಂತಿಕಾರಿ ಪಕ್ಷದೊಳಗೆ ಉಳಿದುಕೊಂಡು ತಮ್ಮ ರಾಜಕೀಯ ವಿಚಾರಗಳಿಗಾಗಿ ಪಕ್ಷದ ವೇದಿಕೆಗಳಾದ ಸಮ್ಮೇಳನ ಮಹಾಧಿವೇಶನಗಳಲ್ಲಿ ಸರಿಯಾದ ರಾಜಕೀಯ ಸಂಘರ್ಷ ಮುನ್ನಡೆಸುವಂತೆ ಮನವರಿಕೆ ಮಾಡಿಸಲು ಚರ್ಚೆ ಮತ್ತು ಪತ್ರಗಳ ಮೂಲಕ ಎಲ್ಲಾ ರೀತಿಯ ಪ್ರಯತ್ನಗಳನ್ನು ನಡೆಸಲಾಗಿತ್ತು. ಆದರೆ ಅವರ ರಾಜಕೀಯ ಹಾಗೂ ಸ್ವಯಂಸಿದ್ಧತೆಯ ಕೊರತೆಗಳಿಂದಾಗಿ ಅವರಿಗೆ ಮನವರಿಕೆ ಮಾಡಿಕೊಳ್ಳಲಾಗಲಿಲ್ಲ.**

ಭಾರತದ ಸಮಾಜದಲ್ಲಿ ಬಂಡವಾಳಶಾಹಿ ಬೆಳವಣಿಗೆಗಳಾಗಿವೆ. ಅರೆ ಊಳಿಗಮಾನ್ಯತೆಯಲ್ಲಿ ಗಣನೀಯ ಬದಲಾವಣೆ ಬಂದಿದೆ. ಹಾಗಾಗಿ ಬಹಿರಂಗ, **ಕಾನೂನುಬದ್ಧ ಹೋರಾಟಗಳನ್ನು ನಡೆಸುತ್ತಾ ವಿಶಾಲ ಜನರನ್ನು ಅಣಿನೆರೆಸಬಹುದೆಂದು ಅಣಿನೆರೆಸಬೇಕೆಂದೂ ಪ್ರತಿಪಾದಿಸುತ್ತಾ ಬಂದಿದೆ. ಪ್ರಭುತ್ವ ಬಲಶಾಲಿಯಾಗಿದೆ, ಸಾಮ್ರಾಜ್ಯಶಾಹಿ ಸ್ಥಿರತೆಯಲ್ಲಿದೆ, ಸಾಮ್ರಾಜ್ಯವಾದ ಹೊಸಹೊಸ ರೂಪದಲ್ಲಿ ತನ್ನ ಸ್ಥಿರತೆಯನ್ನು ಕಾಯ್ದುಕೊಳ್ಳುತ್ತಿದೆ. ಹಾಗಾಗಿ ಪ್ರಪಂಚದ ಕ್ರಾಂತಿಕಾರಿ ಹೋರಾಟಗಳು ಮುನ್ನಡೆಯುತ್ತಿಲ್ಲ. ಜನರಿನ್ನೂ ಕ್ರಾಂತಿಗೆ ತಯಾರಾಗಿಲ್ಲ, ಪರಿಸ್ಥಿತಿ ಇನ್ನೂ ಪಕ್ವವಾಗಿಲ್ಲ. ಜನರನ್ನು ಬೇರೆಬೇರೆ ಕಾನೂನುಬದ್ಧ ರೂಪಗಳ ಮೂಲಕ ವಿಶಾಲವಾಗಿ ಅಣಿನೆರೆಸುತ್ತಾ ಸಿದ್ಧಗೊಳಿಸಬೇಕು. ಕರ್ನಾಟಕ ಅಭಿವೃದ್ಧಿತ ರಾಜ್ಯ ಅದರಲ್ಲೂ ಮಲೆನಾಡು ಕರಾವಳಿಗಳು ಭೂಮಾಲೀಕ ಶೋಷಣೆ ತೀವ್ರವಾಗಿರದ ಅಭಿವೃದ್ಧಿತ ಪ್ರದೇಶ.(ಸಾಪೇಕ್ಷವಾಗಿ ಎಂದೂ ಸೇರಿಸುತ್ತಾರೆ) ಹಾಗಾಗಿ ಇಲ್ಲಿ ಸಶಸ್ತ್ರ ಹೋರಾಟ ಈಗ ಬೇಡ. ಯಾಕೆಂದರೆ ಜನರು ತಯಾರಾಗಿಲ್ಲ ಇತ್ಯಾದಿ ವಾದಗಳನ್ನು** ಪ್ರತಿಪಾದಿಸುತ್ತಾ ಕ್ರಾಂತಿಕಾರಿ ಪಥದಿಂದ ಬದಿಗೆ ಸರಿದು ಕ್ರಮೇಣ ಬಲ ಅವಕಾಶವಾದಿ ಪಥ ರೂಪಿಸಿಕೊಂಡರು. ಪಕ್ಷದ ನೀತಿ ನಿಯಮಾವಳಿಗಳನ್ನು, ವ್ಯಕ್ತಿ **ಸಾಮೂಹಿಕತೆಗೆ ಬದ್ಧರಾಗಿರುವುದು, ಅಲ್ಪಸಂಖ್ಯಾತರು ಬಹುಸಂಖ್ಯಾತರ ನಿರ್ಣಯಗಳಿಗೆ ಬದ್ಧರಾಗಿರುವುದು, ಕೆಳಸಮಿತಿಗಳು ಮೇಲ್ಸಮಿತಿಗಳಿಗೆ ಬದ್ಧರಾಗಿರುವುದು,**

ಇಡೀ ಪಕ್ಷ ಮಹಾಧಿವೇಶನಕ್ಕೆ ಬದ್ಧರಾಗಿರುವುದು ಎಂಬ ವೈಜ್ಞಾನಿಕವಾದ ಪ್ರಜಾತಾಂತ್ರಿಕ ಕೇಂದ್ರತ್ವದ ಸೂತ್ರಗಳನ್ನು ಸಾರಾಸಗಟಾಗಿ ಉಲ್ಲಂಘಿಸಿದರು. ಜಿನೇ ರಾಜ್ಯ ಸಮ್ಮೇಳನದ ಮುಕ್ತಾಯದ ಹಂತದಲ್ಲಿ ಸಮ್ಮೇಳನ ಬಹಿಷ್ಕರಿಸಿ ಪಕ್ಷದಿಂದಲೇ ಹೊರನಡೆದರು. ಹೊರಹೋಗುವಾಗ,

* ಇಂದು ಹೊರ ಹೋಗುವುದು ನಾಳೆ ಉನ್ನತ ಐಕ್ಯತೆ ಸಾಧಿಸಲಿಕ್ಕಾಗಿ.
* ಬೇರೆ ಪಕ್ಷ ಕಟ್ಟದೆ, ದೃಕ್ಪಥ ಪ್ರದೇಶಕ್ಕೆ ಹಾಗೂ ಕ್ರಾಂತಿಕಾರಿ ಚಳುವಳಿಗೆ ಪೂರಕವಾಗಿ ಕೆಲಸ ಮಾಡುತ್ತೇವೆ.
* ಆದಷ್ಟು ಬೇಗ ಮತ್ತೆ ಬಂದು ಸೇರುತ್ತೇವೆ ಇತ್ಯಾದಿ

ಹುಸಿ ಭರವಸೆಗಳನ್ನು ಸಮ್ಮೇಳನಕ್ಕೆ ನೀಡಿದ್ದರು. ಆದರೆ ಪಕ್ಷದಿಂದ ಹೊರಹೋದ ಒಂದು ವಾರದೊಳಗೆ ಪ್ರತ್ಯೇಕ ಪ್ಲೀನಂ ನಡೆಸಿ ಪಕ್ಷ ನಿರ್ಮಿಸುವ ಕಾರ್ಯ ಆರಂಭಿಸಿದರು. ಪಕ್ಷದ ಆಂತರಿಕ ವಿಚಾರಗಳನ್ನು ವಿಕೃತವಾಗಿ ಬರೆದು 'ಕ್ರಾಂತಿಯ ಗತಿತರ್ಕ' ಎಂದು ಎಲ್ಲೆಡೆ ಮುಕ್ತವಾಗಿ ಹಂಚಿದರು. ಅದರಲ್ಲಿ ಪಕ್ಷ ಹಾಗೂ ಪಕ್ಷ ನಾಯಕತ್ವ ಮತ್ತು ಭಾರತದಾದ್ಯಂತ ನಡೆಯುತ್ತಿರುವ ಕ್ರಾಂತಿಕಾರಿ ಚಳುವಳಿ ಕುರಿತು ಸುಳ್ಳು ಮಾಹಿತಿಗಳು, ವಿಕೃತ ಮಾಹಿತಿಗಳನ್ನು ಬರೆದು ಹಂಚಲಾರಂಭಿಸಿದರು. ಪಕ್ಷದ ಮೇಲೆ ಅಪಪ್ರಚಾರ, ದಾಳಿ ಮುನ್ನಡೆಸಿದರು. ಪ್ರತಿಯೊಬ್ಬ ಕ್ರಾಂತಿಕಾರಿಯ ಆದ್ಯ ಕರ್ತವ್ಯವಾದ ಪಕ್ಷಮಾಹಿತಿಗಳನ್ನು ಹಾಗೂ ರಹಸ್ಯ ಕಾಪಾಡಬೇಕಾದುದನ್ನು ಬಹಿರಂಗಗೊಳಿಸಿ ಜನರ ಶತ್ರುಗಳಿಗೆ ಅನುಕೂಲ ಮಾಡಿದರು. ಈಗಲೂ ಈ ಕೆಲಸಗಳನ್ನು ಮುಂದುವರಿಸಿದ್ದಾರೆ.

ಪಕ್ಷದಿಂದ ಹೊರಹೋದ ಈ ಗುಂಪು ಬಲ ಅವಕಾಶವಾದಿ ರಾಜಕೀಯ ಪಥ ಹೊಂದಿದ್ದು ಅರಾಜಕವಾದಿಯಾಗಿದೆ. ಕ್ರಾಂತಿಕಾರಿ ಪಕ್ಷವನ್ನು ವಿಚ್ಛಿದ್ರಗೊಳಿಸಲು ನಿರಂತರ ಪ್ರಯತ್ನ ನಡೆಸುತ್ತಿದೆ. ತಮ್ಮ ಬಲ ಅವಕಾಶವಾದವನ್ನು ಮುಚ್ಚಿಕೊಳ್ಳಲು 'ಕರ್ನಾಟಕ ಮಾವೋವಾದಿ ಸ್ವತಂತ್ರ ಕೇಂದ್ರ' ಎಂಬ ಹೆಸರನ್ನಿಟ್ಟುಕೊಂಡು ಇದೀಗ ಕ್ರಾಂತಿಕಾರಿ ಕಮ್ಯೂನಿಸ್ಟ್ ಪಕ್ಷವೆಂದು ಕರೆದುಕೊಳ್ಳುತ್ತಿದೆ. ಕಾನೂನುಬದ್ಧ ಚಟುವಟಿಕೆಗಳನ್ನು ಪ್ರಧಾನ ಆದ್ಯತೆಯಾಗಿಸಿಕೊಂಡು ಕ್ರಾಂತಿಕಾರಿ ಪಕ್ಷದ ಮೇಲೆ ಕ್ರಾಂತಿಕಾರಿ ಪಥದ ಮೇಲೆ ದಾಳಿ ನಡೆಸುತ್ತಿದೆ. ಆದರೆ ಕ್ರಾಂತಿಕಾರಿ ಪಥದಿಂದಲೇ ದೂರಸರಿದು ಮುನ್ನಡೆಯುತ್ತಿರುವ ಕ್ರಾಂತಿಯ ಮೇಲೆ ವಿಕೃತ ದಾಳಿ ಮುನ್ನಡೆಸುತ್ತಿದೆ. ಜನರ ಮಧ್ಯೆ ಗೊಂದಲ ಮೂಡಿಸಲು ಪ್ರಯತ್ನಿಸುತ್ತಿದೆ. ಸಿಪಿಐ (ಮಾವೋವಾದಿ) ಪಕ್ಷದ ನೇತೃತ್ವದಲ್ಲಿ ಭಾರತಾದ್ಯಂತ ನಡೆಯುತ್ತಿರುವ ಕ್ರಾಂತಿಕಾರಿ ಚಳುವಳಿಯ ಬಗ್ಗೆ, ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಸಾಧಿಸಿದ ಕ್ರಾಂತಿಕಾರಿ ಶಕ್ತಿಗಳ ಮಹಾನ್ ಐಕ್ಯತೆ ಮತ್ತು ಒಂದೇ ಕ್ರಾಂತಿಕಾರಿ ಕೇಂದ್ರದ ಬಗ್ಗೆ ಅಪಪ್ರಚಾರ ಮತ್ತು ದಾಳಿಗಳನ್ನು ನಡೆಸುತ್ತಿವೆ.

## ಸಿಪಿಐ (ಮಾವೋವಾದಿ) ಪಕ್ಷಕ್ಕೆ ಭಾರತದಲ್ಲಿರುವ ಜಾತಿ ಸಮಸ್ಯೆ ಬಗ್ಗೆ ಸರಿಯಾದ ಗ್ರಹಿಕೆ ಇಲ್ಲ ಎಂಬ ಅಪಪ್ರಚಾರ

ಸಿಪಿಐ (ಮಾವೋವಾದಿ) ಪಕ್ಷಕ್ಕೆ ಭಾರತದಲ್ಲಿರುವ ಜಾತಿ ಸಮಸ್ಯೆ ಬಗ್ಗೆ ಸರಿಯಾದ ಗ್ರಹಿಕೆ ಮತ್ತು ಪರಿಹರಿಸುವ ಕಾರ್ಯತಂತ್ರಗಳಿಲ್ಲವೆಂದು ಪ್ರಚಾರ ನಡೆಸುತ್ತಿದೆ. ಭಾರತದ ಕಮ್ಯೂನಿಸ್ಟ್ ಚರಿತ್ರೆಯಲ್ಲಿ ಮೊದಲ ಬಾರಿಗೆ ಜಾತಿ ಸಮಸ್ಯೆ ಬಗ್ಗೆ ಗಂಭೀರವಾಗಿ ಚಿಂತಿಸುತ್ತಾ ಚಳುವಳಿಯಡಿ ಬೃಹತ್ ಮಟ್ಟದಲ್ಲಿ ಸಮಾಜದ ಅತ್ಯಂತ ಕೆಳಜಾತಿ ಮತ್ತು ವರ್ಗಗಳಾದ ದಲಿತರು ಆದಿವಾಸಿಗಳು ಹಿಂದುಳಿದವರನ್ನು ಸಂಘಟಿಸುತ್ತಿದೆ. ನಾಯಕತ್ವ ಶ್ರೇಣಿಗಳಾಗಿ ಬೆಳೆಸುತ್ತಿದೆ. ನಮ್ಮ ಚಳುವಳಿ ಬಲವಾಗಿರುವಲ್ಲಿ ದಲಿತರ ಮೇಲಿನ ಜಾತಿ ದೌರ್ಜನ್ಯಗಳು ಕಡಿಮೆ. ಆ ರೀತಿ ದೌರ್ಜನ್ಯ ಮಾಡಿದ ಕ್ರೂರ ಶಕ್ತಿಗಳನ್ನು ಜನರೇ ನಡೆಸುವ ಪ್ರಜಾಪಂಚಾಯಿತಿಯಡಿ ಸೂಕ್ತವಾಗಿ ಶಿಕ್ಷಿಸಲಾಗುತ್ತದೆ. ನಮ್ಮ ಪಕ್ಷದ ನಾಯಕತ್ವದಲ್ಲಿ ಹಂಚಿಕೆಯಾದ ಲಕ್ಷಾಂತರ ಎಕರೆ ಭೂಮಿಯಲ್ಲಿ ಪ್ರಧಾನವಾದ ಭಾಗ ದಲಿತರಿಗೆ ಹಂಚಿಕೆಯಾಗಿದೆ. ನಮ್ಮ ಪಕ್ಷದ ನಾಯಕತ್ವದಲ್ಲಿ ಬೆಳೆದು ಬರುತ್ತಿರುವ ನವ ಪ್ರಜಾತಾಂತ್ರಿಕ ಪ್ರಜಾಧಿಕಾರದ ಅಂಗಗಳಲ್ಲಿ ದಲಿತರ ಆದಿವಾಸಿಗಳ ಮಹಿಳೆಯರ ಮತ್ತು ಹಿಂದುಳಿದವರ ಪ್ರತಿನಿಧಿಗಳು ಸರಿಯಾದ ಪ್ರಮಾಣದಲ್ಲಿ ಇರುವಂತೆ ಪ್ರಜ್ಞಾಪೂರ್ವಕವಾಗಿ ನೋಡಿಕೊಳ್ಳಲಾಗುತ್ತದೆ. ನಮ್ಮ ಪಕ್ಷದ ಉನ್ನತ ಅಂಗಗಳಾದ ಸಮ್ಮೇಳನ ಮಹಾಧಿವೇಶನಗಳಲ್ಲೂ ಈ ಜನವರ್ಗಗಳ ಪ್ರತಿನಿಧಿತ್ವ ಸೂಕ್ತವಾಗಿ ಇರುವಂತೆ ಪ್ರಜ್ಞಾಪೂರ್ವಕವಾಗಿ ನೋಡಿಕೊಳ್ಳಲಾಗುತ್ತದೆ. ಇದು ನಮ್ಮ ಆಚರಣೆಯಾಗಿದೆ. ಇದು ನಮ್ಮ ಪಕ್ಷದ ಬಗ್ಗೆ ಗ್ರಹಿಕೆಯಿರುವ ಎಲ್ಲರಿಗೂ ತಿಳಿದಿರುವ ವಿಚಾರ. ಈ ಎಲ್ಲಾ ವಿಚಾರಗಳು ಗೊತ್ತಿದ್ದಾಗ್ಯೂ ಆರ್.ಸಿ.ಪಿ. ಎಂಬ ಬಲ ಅವಕಾಶವಾದಿ ಗುಂಪು ಜನರ ಮಧ್ಯೆ ನಮ್ಮ ಬಗ್ಗೆ ಗೊಂದಲ ಮೂಡಿಸುವ ಉದ್ದೇಶದಿಂದ ಅಪಪ್ರಚಾರ ಹಾಗೂ ವಿಕೃತ ವರದಿಗಳನ್ನು ಹರಡುತ್ತಿದೆ.

## ಈ ಗುಂಪು ನಮ್ಮ ಪಕ್ಷದ ವಿರುದ್ಧ ಮಾಡುತ್ತಿರುವ ಮತ್ತೊಂದು ವಿಕೃತ ಪ್ರಚಾರ, ಕಾರ್ಯಕರ್ತರನ್ನು ಬಲಿ ಮಾಡುತ್ತಿದೆ ಎಂಬುದು

ಆಳುವ ವರ್ಗಗಳು ಮತ್ತದರ ಅಧಿಕಾರದ ಅಂಗಗಳನ್ನು, ಅವುಗಳು ನಡೆಸುವ ದೌರ್ಜನ್ಯ, ಶೋಷಣೆ, ಫ್ಯಾಸಿಸ್ಟ್ ದಮನಕಾಂಡಗಳನ್ನು ಕೇವಲ ಧರಣಿ ಸತ್ಯಾಗ್ರಹ ಪ್ರದರ್ಶನಗಳಿಂದ ಮಾತ್ರ ಎದುರಿಸಲು ಸಾಧ್ಯವೆ. ಕೇವಲ ಅಷ್ಟಕ್ಕೆ ಸೀಮಿತ ಮಾಡಿಕೊಂಡ ಬೃಹತ್‌ಮಟ್ಟದ ಹೋರಾಟಗಳು ನೆಲಕಚ್ಚಿ, ಯಾವುದೆ ಮೂಲಭೂತ ಆಗ್ರಹಗಳನ್ನು ಈಡೇರಿಸಿಕೊಳ್ಳದೇ ಹೋದ ಹಲವಾರು ಉದಾಹರಣೆಗಳು ನಮ್ಮ ಮುಂದಿಲ್ಲವೆ. ಇವುಗಳಿಂದ ನಾವು ಗ್ರಹಿಸಬೇಕಾದುದೇನಾಗಿದೆ ಇತ್ಯಾದಿ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳದೆ ಹೋದರೆ ಯಾವುದನ್ನೂ ಸಾಧಿಸಲು ಸಾಧ್ಯವಾಗದೇ ವ್ಯವಸ್ಥೆಯೊಂದಿಗೆ ಮತ್ತದರ ಪ್ರಭುತ್ವದೊಂದಿಗೆ ಒಂದಲ್ಲಾ ಒಂದು ರೀತಿ ರಾಜಿಯಾಗುವ ಪರಿಸ್ಥಿತಿಗೆ ತಲುಪಬೇಕಾಗುತ್ತದೆ.

ಇನ್ನು ಕಾರ್ಯಕರ್ತರನ್ನು ಬಲಿ ಮಾಡಲಾಗುತ್ತಿದೆ ಎಂಬ ವಿಚಾರದ ಬಗ್ಗೆ ಹೇಳುವುದಾದರೆ, ಇದು ಕೆಳಮಟ್ಟದ ಅಪಪ್ರಚಾರ ಮತ್ತು ಜನರನ್ನು ಗೊಂದಲಕ್ಕೆ ತಳ್ಳುವ, ತಪ್ಪುಗ್ರಹಿಕೆಗಳನ್ನು ನೀಡುವ ಉದ್ದೇಶವನ್ನು ಹೊಂದಿದೆ. ಕ್ರೂರ ಫ್ಯಾಸಿಸ್ಟ್ ಆಳುವ ವರ್ಗಗಳು ಮತ್ತವರ ಅಧಿಕಾರದ ಅಂಗಗಳ ವಿರುದ್ಧ ಅವರ ಆರ್ಥಿಕ ರಾಜಕೀಯ ಹಿಡಿತವನ್ನು ಮೂಲಭೂತವಾಗಿ ಪ್ರಶ್ನಿಸಿ ಹೋರಾಡುವಾಗ ಪ್ರಾಣಗಳನ್ನು ಬಲಿದಾನ ಮಾಡುವುದು ಅನಿವಾರ್ಯವಾಗುತ್ತದೆ. ಸಿಪಿಐ (ಮಾವೋವಾದಿ) ಪಕ್ಷದ ಕಾರ್ಯಕರ್ತರಿಂದ ಹಿಡಿದು ನಾಯಕತ್ವದವರೆಗೂ ಸಾವಿರಾರು ಕ್ರಾಂತಿಕಾರಿಗಳು ಭಾರತದ ಆ ಮೂಲಕ ಪ್ರಪಂಚದ ಜನರ ವಿಮೋಚನೆಗಾಗಿ ತಮ್ಮ ಅಮೂಲ್ಯ ಪ್ರಾಣಗಳನ್ನೇ ತೆತ್ತಿದ್ದಾರೆ. ಸಮಾಜದ ಬೆಳವಣಿಗೆಯು ವರ್ಗಹೋರಾಟದ ತ್ಯಾಗ ಬಲಿದಾನದ ಚರಿತ್ರೆಯಾಗಿದೆ. ಇದು ಆಳುವ ವರ್ಗಗಳ ಕ್ರೂರತನಗಳಿಗೆ ಸಾಕ್ಷಿಯಾಗಿವೆ. ಆರ್.ಸಿ.ಪಿ. ಇದನ್ನೇ ಬಲಿ ಮಾಡುವುದು ಎಂದು ಅಪಪ್ರಚಾರ ಮಾಡುತ್ತಿದ್ದಾರೆಂದರೆ ಅದು ಅವರ ಕ್ರಾಂತಿಕಾರಿ ಬದ್ಧತೆ ಏನು ಎಂಬುದನ್ನು ಸೂಚಿಸುತ್ತದೆ. ಇದು ಕ್ರಾಂತಿಕಾರಿ ಜನರ ಹಾಗೂ ಕಾರ್ಯಕರ್ತರ ಹೋರಾಟ ಸ್ಫೂರ್ತಿಯನ್ನು ಹಾಳು ಮಾಡುವ ಉದ್ದೇಶಗಳನ್ನು ಹೊಂದಿದೆ.

## ನಮ್ಮ ಪಕ್ಷಕ್ಕೆ ಸಮೂಹ ಪಥ ಇಲ್ಲವೆಂಬುದು ಅವರ ಮತ್ತೊಂದು ಅಪಪ್ರಚಾರ

ಆದರೆ ಭಾರತದ ಕ್ರಾಂತಿಕಾರಿ ಜನರಿಗೆ ನಮಗಿರುವ ಜನಸಮೂಹದ ಬೆಂಬಲ ಚೆನ್ನಾಗಿ ಗೊತ್ತಿರುವ ಸಂಗತಿ. ಮುಕ್ತ ಅವಕಾಶ ಇಲ್ಲದಿದ್ದರೂ ತೀವ್ರ ನಿರ್ಬಂಧ ದಮನಗಳ ನಡುವೆಯೂ ಜನರು ಹತ್ತಾರು ಸಾವಿರ ಸಂಖ್ಯೆಯಲ್ಲಿ ಪಕ್ಷದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿರುವುದು ಏನನ್ನು ಸೂಚಿಸುತ್ತದೆ. ನಮ್ಮ ಮೇಲಿನ ನಿರ್ಬಂಧ ಸಡಿಲಿಸಿದ ಸಂದರ್ಭದಲ್ಲಿ ಆಂಧ್ರ ಪ್ರದೇಶದಲ್ಲಿ ನಮ್ಮ ಸಭೆಗಳಿಗೆ ಸಕ್ರಿಯವಾಗಿ ಲಕ್ಷಾಂತರ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದಲ್ಲದೆ ಹಲವಾರು ಜನಪರ, ಅಲ್ಪಸಂಖ್ಯಾತ, ದಲಿತ, ಹಿಂದುಳಿದ ವರ್ಗಗಳ ಸಂಘಟನೆಗಳು ನಮ್ಮೊಂದಿಗೆ ಪ್ರತ್ಯೇಕ ಚರ್ಚೆಗಳನ್ನು ನಡೆಸಿ ನಮ್ಮ ಪಕ್ಷವನ್ನು ಬೆಂಬಲಿಸಿದ್ದವು. ದೇಶಾದ್ಯಂತ ನಮ್ಮ

ಪಕ್ಷ ಪ್ರಜಾಯುದ್ಧವನ್ನು ಮುನ್ನಡೆಸುತ್ತಾ ಚಳುವಳಿ ವಿಸ್ತರಿಸುತ್ತಿರುವುದು ಜನಬೆಂಬಲದಿಂದ ಮಾತ್ರ. ಪ್ರಭುತ್ವವನ್ನು ಮತ್ತದರ ಪಡೆಗಳನ್ನು ಎದುರಿಸುತ್ತಾ ತೀವ್ರ ದಮನಕಾಂಡಕ್ಕೆದುರಾಗಿ ಚಳುವಳಿ ಉಳಿದು ಬೆಳೆಯಬೇಕೆಂದರೆ ವಿಶಾಲ ಜನತೆಯ ಸಕ್ರಿಯ ಬೆಂಬಲ ಇದ್ದಾಗ ಮಾತ್ರ ಸಾಧ್ಯ ಎಂಬುದು ಯಾರಿಗೇ ಆದರೂ ಅರ್ಥವಾಗುವ ವಿಚಾರ. ಹಾಗೆಂದಾಗ ನಮ್ಮ ಜನಸಮೂಹವನ್ನು ಸಂಘಟಿಸುವಲ್ಲಿ ರಾಜಕೀಯ ಚೈತನ್ಯ ಬೆಳೆಸುವಲ್ಲಿ ಕೊರತೆಗಳು ಲೋಪಗಳು ಇಲ್ಲವೆಂದು ಇದರ ಅರ್ಥವಲ್ಲ, ಅಂತಹ ಕೊರತೆಗಳು, ಲೋಪಗಳನ್ನು ಕಳೆದ ವರ್ಷ ಜುಲೈನಲ್ಲಿ ನಡೆದ ರಾಜ್ಯ ಸಮ್ಮೇಳನ, ನಂತರ ಫೆಬ್ರವರಿಯಲ್ಲಿ ನಡೆದ ಅಖಿಲ ಭಾರತ ಐಕ್ಯತಾ ಮಹಾಧಿವೇಶನದಲ್ಲೂ (೯ನೇ ಮಹಾಧಿವೇಶನ) ಗುರುತಿಸಿಕೊಂಡು ಚರ್ಚಿಸಿ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ನಮ್ಮ ಚಟುವಟಿಕೆಗಳ ತಪ್ಪುಒಪ್ಪುಗಳನ್ನು ಸರಿಯಾದ ವಿಮರ್ಶೆಗೊಳಪಡಿಸುತ್ತಾ ಸರಿತಿದ್ದಿಕೊಳ್ಳುವುದು ನಮ್ಮ ಪಕ್ಷದ ಪರಂಪರೆಯಾಗಿದೆ. ಚಳುವಳಿಯ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಏರುಪೇರುಗಳು ಸಹಜವಾಗಿ ಇರುತ್ತವೆ. ಆಂಧ್ರದಲ್ಲಿ ಸೇನಾತ್ಮಕವಾಗಿ ನಮಗೆ ತಾತ್ಕಾಲಿಕ ಹಿನ್ನಡೆಯಾಗಿದೆ ಎಂದು ಸಮೀಕ್ಷಿಸಿಕೊಂಡಿದ್ದೇವೆ. ನಮ್ಮ ಚಳುವಳಿ ಹಲವು ಏರುಪೇರುಗಳೊಂದಿಗೆ ಈ ಮಟ್ಟಕ್ಕೆ ಬೆಳೆದು ಬಂದಿದೆ.

ಪ್ರಪಂಚದ ಅದೇ ರೀತಿ ಭಾರತದ ಕ್ರಾಂತಿಕಾರಿ ಪರಂಪರೆಯಲ್ಲಿ ಬಲ ಅವಕಾಶವಾದಿಗಳು ಅಪಾರ ಹಾನಿ ಮಾಡಿ ಕ್ರಾಂತಿಯ ಯಶಸ್ಸಿಗೆ ದ್ರೋಹ ಮಾಡಿರುವುದು ಎಲ್ಲೆಡೆಯೂ ಕಾಣುವ ಸಂಗತಿಯಾಗಿದೆ. ಇದು ಪರಿಷ್ಕರಣವಾದಿಯಾಗಿ ಮಾರ್ಪಟ್ಟು ಆಳುವ ವ್ಯವಸ್ಥೆಗೆ ಹಾಗೂ ಸಾಮ್ರಾಜ್ಯವಾದಕ್ಕೆ ಸೇವೆ ಸಲ್ಲಿಸುತ್ತಿವೆ. ಜನರಿಗೆ ದ್ರೋಹ ಬಗೆಯುತ್ತಿವೆ. ರಷ್ಯಾ ಮತ್ತು ಚೀನ ಕ್ರಾಂತಿಯ ಯಶಸ್ಸಿನ ನಂತರ ಆದೇಶಗಳಲ್ಲಿ ಬಂಡವಾಳವಾದದ ಪುನರ್‌ಸ್ಥಾಪನೆ ಆಗಲೂ ಬಲ ಅವಕಾಶವಾದಿಗಳೇ ಕಾರಣರಾಗಿದ್ದಾರೆ. ಭಾರತದ ಬ್ರಿಟಿಷ್ ವಸಾಹತುಶಾಹಿ ವಿರೋಧಿ ಚಳುವಳಿ ಸಂದರ್ಭದಲ್ಲೂ ಕಮ್ಯೂನಿಸ್ಟರು, ಬಲ ಅವಕಾಶವಾದದಿಂದಾಗಿ ಭಾರತದ ಆಳುವ ವರ್ಗಗಳ ಪಕ್ಷವಾಗಿದ್ದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಬಾಲಂಗೋಚಿಗಳಾಗಿ, ಸಮರಶೀಲವಾಗಿ ಹೋರಾಡುತ್ತಿದ್ದ ಜನರಿಗೆ ದ್ರೋಹ ಬಗೆದರು. ಪರಿಷ್ಕರಣವಾದಿಗಳಾಗಿ ಈಗ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಪಾಲುದಾರರಾಗಿ ಟಾಟಾ, ನಾರಾಯಣ ಮೂರ್ತಿ, ಅಜೀಂ ಪ್ರೇಮ್‌ಜಿಯಂತಹ ದಲ್ಲಾಳಿ ಬಂಡವಾಳಿಗರು ಮತ್ತು ಸಲೀಂ ಗ್ರೂಪಿನಂತಹ ಸಾಮ್ರಾಜ್ಯಶಾಹಿಗಳ ಸೇವೆಗೆ ನಿಂತಿದ್ದಾರೆ. ಪರಿಷ್ಕರಣವಾದವು ಪ್ರಪಂಚದ ಕ್ರಾಂತಿಗೆ ತೀವ್ರ ಅಪಾಯವನ್ನು ಉಂಟುಮಾಡಿ ಕ್ರಾಂತಿಕಾರಿ ಹೋರಾಟಗಳ ಬೆಳವಣಿಗೆಗೆ ಅಡ್ಡಿಯಾಗಿದೆ. ಪ್ರತಿಯೊಬ್ಬ ಕ್ರಾಂತಿಕಾರಿಗಳು ಬಲ ಅವಕಾಶವಾದ ಹಾಗೂ ಪರಿಷ್ಕರಣವಾದದ ವಿರುದ್ಧ ದೃಢವಾಗಿ ಹೋರಾಡದಿದ್ದಲ್ಲಿ ಕ್ರಾಂತಿಗೆ ಮತ್ತು ಜನರಿಗೆ ದೊಡ್ಡ ಹಾನಿ ಸಂಭವಿಸುತ್ತದೆ. ಬಲ ಅವಕಾಶವಾದ ಹಾಗೂ ಪರಿಷ್ಕರಣವಾದದ ವಿರುದ್ಧ ಹೋರಾಡುವುದು ಪ್ರತಿಯೊಬ್ಬ ಕ್ರಾಂತಿಕಾರಿಗಳ ಒಂದು ಮುಖ್ಯ ಕರ್ತವ್ಯವಾಗಿದೆ.

ನಕ್ಸಲ್ಬರಿ ಸಶಸ್ತ್ರ ಸಂಗ್ರಾಮ ಸ್ಫೋಟಗೊಂಡ ನಂತರ ಕೂಡ ಬಲ ಅವಕಾಶವಾದಿಗಳು ಚಳುವಳಿಗೆ ದ್ರೋಹ ಬಗೆದ ಹಲವು ಉದಾಹರಣೆಗಳಿವೆ. ಇದರಿಂದಾಗಿ ಭಾರತದ ಕ್ರಾಂತಿಗೆ ಅಪಾರ ಹಾನಿಯಾಗಿದೆ. ಬಲ ಅವಕಾಶವಾದದ ಪರಿಣಾಮ ಮತ್ತು ಅಪಾಯಗಳ ಬಗ್ಗೆ ಗಮನ ಸೆಳೆಯಲು ಇವುಗಳನ್ನು ಇಲ್ಲಿ ಹೇಳಿದ್ದೇವೆ.

ನ್ಯೂ ಡೆಮಾಕ್ರಸಿ, ತೆರಿಮಲ ನಾಗಿರೆಡ್ಡಿ, ಡಿ.ವಿ. ರಾವ್‌ರಂತಹ ಬಲ ಅವಕಾಶವಾದಿಗಳು ಬಹಳ ಹಿಂದೆಯೇ ಪ್ರತಿಪಾದಿಸಿ ಸೋತುಹೋದ ವಿಚಾರಗಳನ್ನೇ, ಹೊಸ ಮುಖವಾಡ ತೊಟ್ಟು ಕರ್ನಾಟಕದಲ್ಲಿ ಪ್ರತಿಪಾದಿಸುತ್ತಾ ಆರ್.ಸಿ.ಪಿ ಜನರ ಕಣ್ಣಿಗೆ ಮಂಕುಬೂದಿ ಎರಚಲು ಪ್ರಯತ್ನಿಸುತ್ತಿದ್ದಾರೆ. ಕ್ರಾಂತಿಕಾರಿ ಪದಜಾಲಗಳನ್ನು ಬಳಸಿ ರೋಚಕವಾಗಿ ಬಿಂಬಿಸುತ್ತಾ ಸಿಪಿಐ (ಮಾವೋವಾದಿ) ಪಕ್ಷದ ಮೇಲೆ ಮಣ್ಣೆರಚಲು ಪ್ರಯತ್ನಿಸುತ್ತಿದ್ದಾರೆ. ಅದಕ್ಕೆಂದೇ ಹಲವು ಹಾನಿಕರ ತಪ್ಪು ಪದ್ಧತಿಗಳನ್ನು ಅಳವಡಿಸುತ್ತಿದ್ದಾರೆ. ಪಕ್ಷದ ಬಗ್ಗೆ, ಚಳುವಳಿಯ ಬಗ್ಗೆ, ಪಕ್ಷದ ನಾಯಕತ್ವದ ಬಗ್ಗೆ ಹಗುರವಾಗಿ ನೋಡಿ ಪಕ್ಷದ ಬಿಡಿಬಿಡಿ ಕಾರ್ಯಕರ್ತರ ಮಧ್ಯೆ, ಬೆಂಬಲಿಗರು ಹಾಗೂ ಹಿತೈಷಿಗಳ ಮಧ್ಯೆ ವಿಕೃತ ಪ್ರಚಾರ ನಡೆಸುತ್ತಿದ್ದಾರೆ. ದೇಶಾದ್ಯಂತ ಎಲ್ಲಾ ಕ್ರಾಂತಿಕಾರಿ ಶಕ್ತಿಗಳು ಐಕ್ಯಗೊಂಡು ಕ್ರಾಂತಿಕಾರಿ ಶಿಬಿರದಲ್ಲಿ ಅಣಿನೆರೆಯುತ್ತಿರುವಾಗ, ಈ ಆರ.ಸಿ.ಪಿ. ಇಂತಹ ಅರಾಜಕವಾದಿ ಪದ್ಧತಿಗಳನ್ನು ಅಳವಡಿಸುತ್ತಾ ನಮ್ಮ ಪಕ್ಷದ ಮೇಲೆ ದಾಳಿ ನಡೆಸುತ್ತಾ ವಿಚ್ಛಿನ್ನಕರ ಚಟುವಟಿಕೆ ಮುನ್ನಡೆಸಿದೆ. ಇದು ಕ್ರಾಂತಿಕಾರಿ ಚಳುವಳಿಗೆ ಮತ್ತು ಜನರಿಗೆ ಮಾಡುವ ಹಾನಿಯಾಗಿದೆ. ಇದರ ಬಗ್ಗೆ ಜನಸಾಮಾನ್ಯರು, ಹಿತೈಷಿಗಳು ಬೆಂಬಲಿಗರು, ಪ್ರಜಾತಂತ್ರವಾದಿಗಳಿಗೆ ಸ್ಪಷ್ಟನೆ ನೀಡಲು ಈ ಬಹಿರಂಗ ಹೇಳಿಕೆ ನೀಡುತ್ತಿದ್ದೇವೆ. ಬಲ ಅವಕಾಶವಾದಿ ಹಾಗೂ ಅರಾಜಕವಾದಿ ಗುಂಪಾಗಿರುವ ಈ, ಕ್ರಾಂತಿಕಾರಿ ಕಮ್ಯೂನಿಸ್ಟ್ ಪಕ್ಷ (ಈ ಹಿಂದಿನ ಕೆ.ಎಂ.ಎಸ್.ಕೆ.) ಬಗ್ಗೆ, ನಮ್ಮ ಸಿಪಿಐ (ಮಾವೋವಾದಿ) ಪಕ್ಷಕ್ಕೆ, ಜನರಿಗೆ ಹಾಗೂ ಕ್ರಾಂತಿಗೆ ಹಾನಿ ಮಾಡುವ ಅದರ ಎಲ್ಲಾ ಚಟುವಟಿಕೆಗಳ ಬಗ್ಗೆ ಎಚ್ಚರವಾಗಿದ್ದು ಅವರ ಅಂತಹ ಪ್ರಯತ್ನಗಳ ವಿರುದ್ಧ ದೃಢವಾಗಿ ಹೋರಾಡಬೇಕೆಂದು ಎಲ್ಲಾ ಜನಸಾಮಾನ್ಯರು, ಬೆಂಬಲಿಗರು ಹಾಗೂ ಹಿತೈಷಿಗಳಲ್ಲಿ ಮನವಿ ಮಾಡುತ್ತಿದ್ದೇವೆ. ಇಂತಹ ವಾದಗಳನ್ನು ಪ್ರತಿಪಾದನೆ ಮಾಡಿದ ಎಲ್ಲರೂ ಪರಿಷ್ಕರಣವಾದಿಗಳಾಗಿ, ಇಲ್ಲವೆ ಕೇವಲ ಕಾನೂನುಬದ್ಧ ಹೋರಾಟಗಳಿಗೆ ಸೀಮಿತರಾಗಿ ನಗರಗಳ ಚಟುವಟಿಕೆಗಳಿಗೆ ಸೀಮಿತರಾಗಿ ಕ್ರಾಂತಿಕಾರಿ ಬಣದಿಂದಲೇ ದೂರ ಸರಿದಿರುವುದೇ ಚರಿತ್ರೆಯಾಗಿದೆ.ಅವರ ಅಪಾಯಕಾರಿ ರಾಜಕೀಯದ ಕುರಿತು ಗ್ರಹಿಕೆ ನೀಡುವ ನಮ್ಮ ಲೇಖನವೊಂದನ್ನು ಈ ಹೇಳಿಕೆಯೊಂದಿಗೆ ಪ್ರತ್ಯೇಕನಾಗಿ ನೀಡುತ್ತಿದ್ದೇವೆ. ಅದನ್ನು ತಾವೆಲ್ಲರೂ ಗಮನಿಸಬೇಕೆಂದು ಕೋರುತ್ತಿದ್ದೇವೆ.

## ಕರ್ನಾಟಕದಲ್ಲಿ ನಮ್ಮ ಪಕ್ಷದ ಬೆಳವಣಿಗೆ ಕುರಿತು ಸಂಕ್ಷಿಪ್ತ ವಿವರ

ಕರ್ನಾಟಕದಲ್ಲಿ ಕ್ರಾಂತಿಕಾರಿ ಪಕ್ಷ ೧೯೮೦ರಲ್ಲಿ ಬೆರಳೆಣಿಕೆಯ ಜನರೊಂದಿಗೆ ಆರಂಭವಾಯಿತು. ಕರ್ನಾಟಕದಲ್ಲಿ ಕ್ರಾಂತಿಕಾರಿ ಚಳುವಳಿಯ ಪರಂಪರೆ ಹಾಗೂ ಪ್ರಭಾವ ಇರದಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಪಕ್ಕದ ಆಂಧ್ರದಲ್ಲಿ ೧೯೬೭ರ ಭಾರತದ ಕ್ರಾಂತಿಕಾರಿ ಚಳುವಳಿಗೆ ತಿರುವು ನೀಡಿ ಸ್ಪಷ್ಟ ಹಾದಿ ಮತ್ತು ಗ್ರಹಿಕೆ ನೀಡಿದ ಮಹಾನ್ ನಕ್ಸಲ್ಬರಿ ಹೋರಾಟದ ಪ್ರಭಾವದಿಂದ ಚಳುವಳಿ ಬೆಳೆದು ಬರುತ್ತಿತ್ತು. ೧೯೮೦ರ ವೇಳೆಗೆ ಸಿಪಿಐ (ಎಂ.ಎಲ್) (ಪೀಪಲ್ಸ್‌ವಾರ್) ಪಕ್ಷದ ಉಗಮದ ಸಂದರ್ಭವಾಗಿತ್ತು. ಅದರಲ್ಲಿ ಕರ್ನಾಟಕ ಮತ್ತು ತಮಿಳುನಾಡು ಕೂಡ ಭಾಗಿಯಾದವು. ೧೯೮೬-೮೭ರ ಸುಮಾರಿಗೆ ಕರ್ನಾಟಕದಲ್ಲಿ ಸಿಪಿಐ (ಎಂ.ಎಲ್) (ಪೀಪಲ್ಸ್‌ವಾರ್) ಪಕ್ಷದ ರಾಜ್ಯ ಸಮಿತಿ ಅಸ್ತಿತ್ವಕ್ಕೆ ಬಂದಿತು. ಬೆಂಗಳೂರಿನ ಕೊಳಚೆ ಪ್ರದೇಶಗಳಲ್ಲಿ ಯುವಜನರ ಮಧ್ಯೆ ಆರಂಭಗೊಂಡ ನಮ್ಮ ಪಕ್ಷದ ಚಟುವಟಿಕೆ ಕ್ರಮೇಣ ವಿದ್ಯಾರ್ಥಿಗಳು, ಬುದ್ಧಿಜೀವಿಗಳು, ರೈತರು, ಕಾರ್ಮಿಕರ ಮಧ್ಯೆ ಪ್ರವೇಶಿಸಿತು. ೧೯೮೫-೮೬ರ ವೇಳೆಗೆ ಅತ್ಯಂತ ಹಿಂದುಳಿದ ಪ್ರದೇಶವಾದ ಹೈದರಾಬಾದ್ ಕರ್ನಾಟಕದಲ್ಲಿ ವಿದ್ಯಾರ್ಥಿ ಯುವಜನರ ಮಧ್ಯೆ ವಿಸ್ತರಿಸಿದ ಪಕ್ಷದ ಚಟುವಟಿಕೆ ರೈತ-ಕೂಲಿಗಳ ಮಧ್ಯೆ ಆರಂಭವಾಯಿತು. ಭೂಮಾಲೀಕ ವಿರೋಧಿ ಚಳುವಳಿ ಆರಂಭವಾಗಿ ಸಶಸ್ತ್ರ ಹೋರಾಟದ ರೂಪ ಪಡೆದುಕೊಂಡಿತು. ಕೂಲಿಗಾಗಿ, ಮಹಿಳೆಯರ ಹಾಗೂ ದಲಿತರ ಮೇಲಿನ ದೌರ್ಜನ್ಯ, ರೈತ-ಕೂಲಿಗಳ ಮೇಲಿನ ದೌರ್ಜನ್ಯಗಳ ವಿರುದ್ಧ ಹಲವಾರು ಹೋರಾಟಗಳನ್ನು ಸಂಘಟಿಸಲಾಯಿತು. ರೈತ-ಕೂಲಿಗಳಿಂದ ಅಕ್ರಮವಾಗಿ ಕಿತ್ತುಗೊಂಡಿದ್ದ ಹತ್ತಾರು ಎಕರೆ ಭೂಮಿಯನ್ನು ಭೂಮಾಲೀಕರಿಂದ ವಶಪಡಿಸಿಕೊಂಡು ಹಕ್ಕುದಾರ ಜನರು ಪಡೆದುಕೊಂಡರು. ಭೂಮಾಲೀಕರ ಹಿಡಿತದಲ್ಲಿದ್ದ ನೂರಾರು ಎಕರೆ ಸರ್ಕಾರಿ ಭೂಮಿಯನ್ನು ಜನರು ವಶಪಡಿಸಿಕೊಂಡು ಹಂಚಿಕೊಂಡರು. ನಮ್ಮ ಪಕ್ಷ ಇದಕ್ಕೆ ನಾಯಕತ್ವ ನೀಡಿತು. ಒಂದುಕಾಲದಲ್ಲಿ ಭೂಮಾಲೀಕರ ಎದುರು ಶುಭ್ರಬಟ್ಟೆ, ಚಪ್ಪಲಿ ತೊಡುವುದು ಇರಲಿ, ತಲೆ ಎತ್ತಿ ಕೂಡ ನೋಡಲಾಗದ ಜನರು ಪಕ್ಷದ ನಾಯಕತ್ವದಡಿ ಸಂಘಟಿತರಾಗಿ ದುಷ್ಟ ಭೂಮಾಲೀಕರನ್ನು ಪ್ರಜಾಪಂಚಾಯಿತಿಗೆ ಎಳೆದುಕೊಂಡು ಬಂದು ಶಿಕ್ಷೆ ವಿಧಿಸುವಷ್ಟು ಪ್ರಜ್ಞೆ ಹಾಗೂ ಶಕ್ತಿ ಪಡೆದುಕೊಂಡರು. ಸರ್ಕಾರ, ಪೊಲೀಸ್ ಹಾಗೂ ನ್ಯಾಯಾಲಯಗಳು ಹತ್ತಾರು ವರ್ಷಗಳಿಂದ ಮುಂದೂಡಿಕೊಂಡು

ಬಂದಿದ್ದ ಹಲವಾರು ವ್ಯಾಜ್ಯಗಳನ್ನು ಜನರು ತಮ್ಮದೇ ಪ್ರಜಾಪಂಚಾಯಿತಿಗಳಲ್ಲಿ ಪಕ್ಷದ ನಾಯಕತ್ವದಲ್ಲಿ ಪರಿಹರಿಸಿಕೊಂಡರು. ಒಂದು ಕೇಂದ್ರದಲ್ಲಿದ್ದ ಗ್ರಾಮೀಣ ಸಶಸ್ತ್ರ ಹೋರಾಟ ಮೂರು ಕೇಂದ್ರಗಳಿಗೆ ವಿಸ್ತರಿಸಲ್ಪಟ್ಟಿತು. ಪಕ್ಷದ ಚಟುವಟಿಕೆಗಳು ವಿಸ್ತರಿಸಿದವು. ಅತ್ಯಂತ ಸಂಕಷ್ಟಗಳಿಂದ ನರಳುತ್ತಿದ್ದ ರೈತಕೂಲಿಗಳನ್ನು ಸಮರಶೀಲವಾಗಿ ಸಂಘಟಿಸಿ ಕ್ರೂರ ಭೂಮಾಲೀಕರಿಗೆ ಸಡ್ಡು ಹೊಡೆದು ಚಳುವಳಿ ಬೆಳೆಯಲಾರಂಭಿಸಿತು. ಕರ್ನಾಟಕದ ಹಲವು ಜಿಲ್ಲಾ ಹಾಗೂ ತಾಲ್ಲೂಕುಗಳಲ್ಲಿ ನಮ್ಮ ಚಟುವಟಿಕೆಗಳು ಆರಂಭವಾದವು. ಪಕ್ಷ ಬೆಳೆಯತೊಡಗಿತು. ಕರ್ನಾಟಕದಲ್ಲಿ ಕ್ರಾಂತಿಕಾರಿ ರಾಜಕೀಯ ಹಾಗೂ ಚಳುವಳಿಯ ಪ್ರಭಾವ ಹರಡತೊಡಗಿತು.

೧೯೯೬-೯೭ರ ವೇಳೆಗೆ ಪ್ರಭುತ್ವದ ದಮನ ಹೆಚ್ಚತೊಡಗಿತು. ಕ್ರಾಂತಿಕಾರಿ ಚಳುವಳಿಯನ್ನು ಹೊಸಕಿಹಾಕುವ ಕುತಂತ್ರಗಳನ್ನು ಹೆಚ್ಚಿಸಿತು. ಬೀದರಿನ ಗುರುಪಾದಪ್ಪ ನಾಗಮಾರಪಳ್ಳಿ (ಮಾಜಿ ಅರಣ್ಯ ಸಚಿವ), ರಾಯಚೂರಿನ ಎಂ.ಎಸ್. ಪಾಟೀಲ್, ಲಿಂಗಸುಗೂರಿನ ಅಮರೇಗೌಡ ಬಯ್ಯಾಪುರ (ಮಾಜಿ ಸಚಿವರುಗಳು) ರಂತಹ ಕ್ರೂರ ಭೂಮಾಲೀಕರ ಹಾಗೂ ಅವರ ಶೋಷಣೆಯ ಬೆಂಗಾವಲಿಗೆ ಸರ್ಕಾರ ಮತ್ತದರ ಪಡೆಗಳು ನಿಂತವು. ಸುಳ್ಳು ಕೇಸುಗಳು, ಬಂಧನ, ಚಿತ್ರಹಿಂಸೆ, ಸುಳ್ಳು ಎನ್‌ಕೌಂಟರ್ ಕಗ್ಗೊಲೆಗಳು ಆರಂಭವಾದವು. ಕಾ. ಭಾಸ್ಕರ್, ಕಾ. ಬುಡ್ಡಣ್ಣರನ್ನು ಕಗ್ಗೊಲೆ ಮಾಡಲಾಯಿತು.

ಆರಂಭದಿಂದಲೂ ಕರ್ನಾಟಕದ ಪರಿಸರ ಪರ, ಜನಪರ, ಕೋಮುವಾದಿ ವಿರೋಧಿ ಚಳುವಳಿಗಳಲ್ಲಿ ಪಕ್ಷವು ಸರಿಯಾದ ಗ್ರಹಿಕೆಯೊಂದಿಗೆ ಸಕ್ರಿಯ ಪಾತ್ರ ನಿರ್ವಹಿಸುತ್ತಾ ಬರುತ್ತಿದೆ. ಭಾಷೆ, ನಾಡು, ಸಾಹಿತ್ಯ, ಸಂಸ್ಕೃತಿಗಳ ರಕ್ಷಣೆ ಹಾಗೂ ಅಭಿವೃದ್ಧಿಗಾಗಿ ವರ್ಗದೃಷ್ಟಿಕೋನದೊಂದಿಗೆ ಶ್ರಮಿಸುತ್ತಾ ಬರುತ್ತಿದೆ. ರಾಷ್ಟ್ರೀಯತೆ, ಸ್ವಾಯತ್ತತೆ, ಗಣರಾಜ್ಯ ವ್ಯವಸ್ಥೆ, ಪ್ರಜಾತಂತ್ರವನ್ನು ಸರಿಯಾದ ಗ್ರಹಿಕೆಯೊಂದಿಗೆ ಪ್ರತಿಪಾದಿಸುತ್ತಾ ಶಿಕ್ಷಣ ನೀಡುತ್ತಾ ಕಾರ್ಯ ನಿರ್ವಹಿಸುತ್ತಿದೆ.

೨೦೦೧ರಲ್ಲಿ ಕರ್ನಾಟಕದ ವ್ಯೂಹಾತ್ಮಕ ಪ್ರದೇಶವಾದ ಪಶ್ಚಿಮ ಘಟ್ಟ ದೃಕ್ಪಥ ಪ್ರದೇಶವನ್ನು ಆಯ್ಕೆ ಮಾಡಿಕೊಂಡು ಸಶಸ್ತ್ರ ಚಳುವಳಿಯನ್ನು ಬೆಳೆಸುವ ನಿರ್ಣಯವನ್ನು ರಾಜ್ಯ ಸಮಿತಿ ತೆಗೆದುಕೊಂಡಿತು. ಆ ವೇಳೆಗೆ ಹೈ.ಕ. ಪ್ರದೇಶದಲ್ಲಿ ನಮ್ಮ ಚಳುವಳಿ ಕೆಲವು ನಷ್ಟಗಳನ್ನು ಕಂಡಿತು. ಸರ್ಕಾರದ ತೀವ್ರ ದಮನಕಾಂಡ ಹೆಚ್ಚುತ್ತಿತ್ತು. ಇರುವ ಶಕ್ತಿಗಳಿಂದ ಎರಡು ಕಡೆ ಗ್ರಾಮೀಣ ಸಶಸ್ತ್ರ ಚಳುವಳಿಯನ್ನು ಮುನ್ನಡೆಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ದೃಕ್ಪಥ ಪ್ರದೇಶದಲ್ಲಿ ಪ್ರಧಾನ ಗಮನ ನೀಡಬೇಕಾಗಿದ್ದುದರಿಂದ ಮಲೆನಾಡು ಕರಾವಳಿಗಳಲ್ಲಿ ಚಳುವಳಿ ನಿರ್ಮಿಸಲು ಹೈಕದಿಂದ ನಮ್ಮ ಪ್ರಧಾನ ಶಕ್ತಿಗಳನ್ನು ಸ್ಥಳಾಂತರಿಸಿದೆವು. ನಾವು ಮಲೆನಾಡು ಕರಾವಳಿಗಳಲ್ಲಿ ಚಟುವಟಿಕೆ ಪ್ರಾರಂಭಿಸಿ ಆಗಲೇ ಹಲವು ವರ್ಷಗಳಾಗಿವೆ. ಜನಪರ, ಪರಿಸರಪರ ಚಳುವಳಿ, ವಿದ್ಯಾರ್ಥಿ ಯುವಜನರ ಮಧ್ಯೆ ಪಕ್ಷ ಸಕ್ರಿಯವಾಗಿ ತೊಡಗಿಸಿಕೊಂಡಿತ್ತು. ಪಕ್ಷದ ರಾಜಕೀಯವನ್ನು ಜನರ ಮಧ್ಯೆ ತೆಗೆದುಕೊಂಡು ಹೋದೆವು. ಭೂಮಾಲೀಕತ್ವ ಮತ್ತದರ ಸಾಮಾಜಿಕ ಹಿಡಿತ, ಸಾಮ್ರಾಜ್ಯವಾದ ಮತ್ತದರ ಹೆಚ್ಚುತ್ತಿರುವ ಬಿಗಿತ ಹಾಗೂ ಭಾರತದ ಅರೆ ಊಳಿಗಮಾನ್ಯ ಅರೆ ವಸಾಹತು ಸಮಾಜವನ್ನು ಸರಿಯಾಗಿ ಗ್ರಹಿಸಿ ಈ ಸಮಾಜದ ಮೂಲಭೂತ ಬದಲಾವಣೆಗಾಗಿ ನವ ಪ್ರಜಾತಂತ್ರ ಕ್ರಾಂತಿಯನ್ನು ಯಶಸ್ವಿಗೊಳಿಸಲು ಪಕ್ಷ ಶ್ರಮಿಸುತ್ತಿದೆ. ಭಾರತದ ಇತರ ರಾಜ್ಯಗಳಂತೆ ಕರ್ನಾಟಕದಲ್ಲೂ ಸಶಸ್ತ್ರ ಕ್ರಾಂತಿಕಾರಿ ಹೋರಾಟವನ್ನು ಕಟ್ಟಿ ಬೆಳೆಸುತ್ತಿದೆ. ಅರೆ ಊಳಿಗಮಾನ್ಯ ಅರೆ ವಸಾಹತು ಸಮಾಜದ ಗುಣಲಕ್ಷಣವಾದ ಅಸಮಾನ ಬೆಳವಣಿಗೆ ಅದಕ್ಕನುಗುಣವಾಗಿ ಚಳುವಳಿ ಕೂಡ ಬೆಳೆಸಬೇಕಾದ ಗ್ರಹಿಕೆಯೊಂದಿಗೆ ಪಕ್ಷ, ಸೇನೆ ಮತ್ತು ಐಕ್ಯರಂಗವನ್ನು ಕಟ್ಟಿ ಬೆಳೆಸುವ ಗುರಿಯೊಂದಿಗೆ ಕೆಲಸ ಮಾಡುತ್ತಿದ್ದೇವೆ. ಭೂಮಾಲೀಕತ್ವ, ದಲ್ಲಾಳಿ ಅಧಿಕಾರಶಾಹಿ ಬಂಡವಾಳಶಾಹಿ ಮತ್ತು ಸಾಮ್ರಾಜ್ಯವಾದದ ವಿರುದ್ಧ ಕಾರ್ಮಿಕರು, ರೈತರು, ಮಧ್ಯಮ ವರ್ಗ, ಶ್ರೀಮಂತ ವರ್ಗ ಮತ್ತು ರಾಷ್ಟ್ರೀಯ ಬಂಡವಾಳಶಾಹಿಗಳನ್ನು ಒಗ್ಗೂಡಿಸಿ ಸಮಾಜದ ಮುಂಚಲನೆಗೆ ಹಾದಿ ಮಾಡುವ, ಆ ಮೂಲಕ ಸಾಮಾಜಿಕ ಬದಲಾವಣೆ ಮಾಡುವ, ನಿಜವಾದ ಪ್ರಜಾತಂತ್ರ, ಸ್ವಾತಂತ್ರ್ಯ, ಗಣರಾಜ್ಯ ಹಾಗೂ ಸ್ವಾಯತ್ತತೆ ಸ್ಥಾಪನೆಯನ್ನು ಸಾಕಾರಗೊಳಿಸಲು ಪಕ್ಷ ಕಾರ್ಯ ನಿರ್ವಹಿಸುತ್ತಿದೆ. ಜನರ ಶತ್ರುಗಳಾದ ದೊಡ್ಡ ಭೂಮಾಲೀಕರು, ದಲ್ಲಾಳಿ ಬಂಡವಾಳಶಾಹಿಗಳ ಮತ್ತು ಸಾಮ್ರಾಜ್ಯಶಾಹಿಗಳು ಮತ್ತವರ ಪರವಾಗಿರುವವರನ್ನು ಗುರಿ ಮಾಡಿ ಜನರ ಎಲ್ಲಾ ಶಕ್ತಿಗಳನ್ನು ಒಗ್ಗೂಡಿಸಲು ಪಕ್ಷ ಶ್ರಮಿಸುತ್ತಿದೆ. ಅದಕ್ಕಾಗಿ ರೈತ ಕಾರ್ಮಿಕರ ಐಕ್ಯತೆಯ ಬುನಾದಿ ಮೇಲೆ ಸಮಾಜದ ಇತರ ವರ್ಗಗಳನ್ನು ಒಗ್ಗೂಡಿಸುತ್ತಿದೆ.

ಭಾರತದ ಆಳುವ ವರ್ಗಗಳು ಮತ್ತದರ ಸರ್ಕಾರಗಳು ತೀವ್ರ ಪ್ರತಿಗಾಮಿ ಗುಣಸ್ವಭಾವ ಹೊಂದಿವೆ. ಅರೆ ಊಳಿಗಮಾನ್ಯ ಅರೆ ವಸಾಹತು ಸಾಮಾಜಿಕ ವ್ಯವಸ್ಥೆ ಬಂಡವಾಳಶಾಹಿ ಪ್ರಜಾತಾಂತ್ರಿಕ ಗುಣಗಳನ್ನು ಹೊಂದಿರುವುದಿಲ್ಲ. ಮೇಲುಮಟ್ಟದ ಕೆಲವು ಪ್ರಜಾತಾಂತ್ರಿಕ ಲಕ್ಷಣಗಳು ಕಾಣಿಸುವಂತಿದ್ದರೂ ಸಾರಾಂಶದಲ್ಲಿ ಅಪ್ಪಟ ಪ್ರತಿಗಾಮಿ ಫ್ಯಾಸಿಸ್ಟ್ ಗುಣಸ್ವಭಾವ ಹೊಂದಿದೆ. ಪ್ರಜಾತಾಂತ್ರಿಕ ಹಕ್ಕುಗಳು, ಅಭಿವ್ಯಕ್ತಿ ಸ್ವಾತಂತ್ರ್ಯ ಇತ್ಯಾದಿಗಳು ಸಾರಾಂಶದಲ್ಲಿ ಇಲ್ಲ. ಆಳುವ ವರ್ಗಗಳು ಮತ್ತದರ ಸರ್ಕಾರಗಳಡಿ ಮೂಲವನ್ನು ಪ್ರಶ್ನಿಸದಷ್ಟು ಕಾಲ, ಕೆಲವು ಪ್ರಜಾತಾಂತ್ರಿಕ ಹಕ್ಕುಗಳು ಮೇಲ್ಮಟ್ಟಕ್ಕೆ ಗೋಚರಿಸುವಂತಿರುತ್ತವೆ. ಆದರೆ ಈಗ ಸಾಮ್ರಾಜ್ಯಶಾಹಿ ಹಾಗೂ ಭಾರತದ ಆಳುವ ವರ್ಗಗಳ ಬಿಕ್ಕಟ್ಟು ತೀವ್ರವಾಗುತ್ತಿರುವುದರಿಂದಾಗಿ ಇರುವ ಕೆಲವು ಮೇಲ್ಮಟ್ಟದ ಪ್ರಜಾತಾಂತ್ರಿಕ ಹಕ್ಕುಗಳು ಇಲ್ಲವಾಗುತ್ತವೆ.

ಭಾರತದ ಸಮಾಜದ ಅರೆ ಊಳಿಗಮಾನ್ಯ ಅರೆ ವಸಾಹತು ಲಕ್ಷಣಗಳನ್ನು ಸರಿಯಾಗಿ ಗುರುತಿಸಿಕೊಳ್ಳದೆ ಭಾರತದ ಸಾಮಾಜಿಕ ಬೆಳವಣಿಗೆ ಹಾಗೂ ಬದಲಾವಣೆ ಸಾಧ್ಯವಾಗುವುದಿಲ್ಲ. ಭಾರತದ ಸಮಾಜದ ಬದಲಾವಣೆ ದೀರ್ಘಕಾಲಿಕ ಪ್ರಜಾಯುದ್ಧದ ಮೂಲಕ ಮಾತ್ರ ಸಾಧ್ಯ. ಹಾಗಾಗಿ ಸಶಸ್ತ್ರ ಹೋರಾಟವನ್ನು ಗ್ರಾಮೀಣ ಪ್ರಾಂತ್ಯಗಳಲ್ಲಿ ಕಟ್ಟಿ ಬೆಳೆಸುತ್ತಾ ಸ್ಥಾವರ ಪ್ರದೇಶಗಳನ್ನು ದೇಶಾದ್ಯಂತ ನಿರ್ಮಿಸುತ್ತಾ ಅಂತಿಮವಾಗಿ ನಗರಗಳನ್ನು ವಶಪಡಿಸಿಕೊಂಡು ಬೃಹತ್ ಬಹುಸಂಖ್ಯಾತ ಜನರ ಪ್ರಭುತ್ವಾಧಿಕಾರವನ್ನು ಸ್ಥಾಪಿಸುವುದು ಕ್ರಾಂತಿಕಾರಿ ಪಕ್ಷದ ಗುರಿಯಾಗಿರಬೇಕಿರುತ್ತದೆ. ಪ್ರಧಾನ ಸಂಘಟನಾ ರೂಪ ಸೇನೆಯಾಗಿಯೂ, ಪ್ರಧಾನ ಹೋರಾಟ ರೂಪ ಯುದ್ಧವಾಗಿಯೂ ಇರಬೇಕಾಗುತ್ತದೆ. ಈ ಉದ್ದೇಶಕ್ಕೆ ಪೂರಕವಾಗಿ ಎಲ್ಲಾ ಕಡೆ ಸಮೂಹ ಸಂಘಟನೆಗಳು, ಬಹಿರಂಗ ಸಮೂಹ ಹೋರಾಟಗಳು, ಐಕ್ಯರಂಗಗಳನ್ನು ನಿರ್ಮಿಸಬೇಕಿರುತ್ತದೆ.

ಇಂದು ಅಮೇರಿಕ, ಬ್ರಿಟನ್‌ನಂತಹ ಸಾಮ್ರಾಜ್ಯಶಾಹಿ (ಪ್ರಪಂಚ ಬಂಡವಾಳಶಾಹಿ) ದೇಶಗಳಲ್ಲೆ ಮೊದಲಿದ್ದ ಬಂಡವಾಳಶಾಹಿ ಪ್ರಜಾತಾಂತ್ರಿಕ ಹಕ್ಕುಗಳನ್ನು ಜನರಿಂದ ಕಿತ್ತುಕೊಳ್ಳಲಾಗುತ್ತಿದೆ. ಐರೋಪ್ಯ ಸಾಮ್ರಾಜ್ಯಶಾಹಿ ದೇಶಗಳಲ್ಲೂ ಅಮೇರಿಕ ಪ್ರೇರಿತ ಭಯೋತ್ಪಾದನಾ ವಿರೋಧಿ ಹೋರಾಟದ ನೆಪದಲ್ಲಿ ಇದುವರೆಗೂ ಇದ್ದ ಮಾನವ ಹಕ್ಕುಗಳನ್ನೂ ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನೂ ಕಸಿಯುವಂತಹ ಕರಾಳ ಕಾನೂನು ಕಟ್ಟಳೆಗಳನ್ನು ಜನರ ಮೇಲೆ ಹೇರಲಾಗುತ್ತಿದೆ. ಹಾಗಾಗಿ ಇಂದು ಜಗತ್ತಿನ ಬಹುತೇಕ ಬಹಿರಂಗ ಹೋರಾಟಗಳು ಬೀದಿ ಕಾಳಗಗಳಾಗಿವೆ. ಜಗತ್ತಿನ ಎಲ್ಲಾ ಸಾಮಾಜಿಕ ವ್ಯವಸ್ಥೆಗಳು ಮತ್ತದರ ಪ್ರಭುತ್ವಗಳು ಅಂತಹ ಪರಿಸ್ಥಿತಿಯನ್ನು ತಂದಿವೆ. ಇವುಗಳು ಪ್ರಜಾಯುದ್ಧಕ್ಕಿರುವ ಮಹತ್ವ ಮತ್ತು ಅದರ ಅಗತ್ಯಗಳನ್ನು ಮತ್ತಷ್ಟು ನಮ್ಮ ಮುಂದೆ ತೆರೆದಿಡುತ್ತದೆ.

**ಕ್ರಾಂತಿಕಾರಿ ಶುಭಾಶಯಗಳೊಂದಿಗೆ,**

**ಗಂಗಾಧರ**
**ರಾಜ್ಯ ಸಮಿತಿ ಪರವಾಗಿ**
**ಸಿ.ಪಿ.ಐ. (ಮಾವೋವಾದಿ)**
**ಕರ್ನಾಟಕ**

**೩೦.೦೯.೨೦೦೭**